(ಶ್ರೀ ಎಚ್. ಕೆ. ವೀರಣ್ಣಗೌಡ)

ಎಂಬುದು ಸರ್ಕಾರಕ್ಕೆ ತಿಳಿದಿದೆ. ಬೇಕಾದಷ್ಟು ಈಗಾಗಲೇ ಸಿಬ್ಬಂದಿ, ಸಾರಿಗೆಗಳನ್ನು ಇಟ್ಟು ಕೊಂಡಿರುವುದರಿಂದ ಎಲ್ಲಾಕಡೆಗಳಲ್ಲೂ ಈ ಕೆರೆಗಳ ದುರಸ್ತಿ ಕಾಮಗಾರಿ ತ್ವರಿತವಾಗಿ ನಡೆಯುತ್ತಿದೆ. ಅದರಲ್ಲೂ ಮುಖ್ಯವಾಗಿ ನೀರಾವರಿ ಕೆಲಸಗಳಿಗೆ ಸರ್ಕಾರದವರು ಪೂರ್ಣ ಗಮನವನ್ನು ಕೊಡುತ್ತಿದ್ದಾರೆ.

ಶ್ರೀ ಎನ್. ಜಿ. ನರಸಿಂಹೇಗೌಡ.—ಎಸ್ಟಿಮೇಟು ತಯಾರಾಗಿ ಮಂಜೂರು ಆಗಿದ್ದರೂ ಕೂಡ ದುಡ್ಡು ಇಲ್ಲ ಅದ ಕಾರಣ ಕೆಲಸ ನಿಲ್ಲಿಸಿ ಎಂದು ತಿಳಿಸಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ರಸ್ತೆಯವಿಚಾರ ಈಗತಾನೆ ಹೇಳಿದ ಉತ್ತರವು ಇದಕ್ಕೂ ಅನ್ವಯಿಸುತ್ತದೆ. ಕೆಲಸ ಸ್ವಲ್ಪ ನಿಧಾನವಾಗಿರಬಹುದು. ಆದರೆ ಇತ್ತೀಚೆಗೆ ಹಣ ಒದಗಿಸಿದೆ ಸರ್ಕ್ಯೂಲರ್ ಹೊರಡಿಸಿದೆ. ಹಣ ಬಟವಾಡೆ ಆಗುತ್ತಾ ಇದೆ. ಕೆಲಸ ನಿಲ್ಲಿಸಿಲ್ಲ. ಕೆಲಸ ನಡೆಯುತ್ತಿದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಕೆಲಸ ನಿಲ್ಲಿಸಬೇಕೆಂದು ಸರ್ಕ್ಯೂಲರ್ ಹೊರಡಿಸಿಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇಲ್ಲ. ಅದು ನಾಲ್ಕುತಿಂಗಳು ಹಿಂದಿನಮಾತು. ಕೇಂದ್ರ ಸರಕಾರದಿಂದ ಹಣ ಬರಬೇಕಾಗಿತ್ತು, ಈಗ ಹಣ ಬಂದಿದೆ. ಕೆಲಸ ನಡೆದಿದೆ. ನಿರೀಕ್ಷಣೆಯಲ್ಲಿದ್ದ ಕೆಲಸಗಳ ಬಗ್ಗೆ ಹಾಗೆ ತಿಳಿಸಿತ್ತು. ಮಂಜೂರಾದ ಕೆಲಸಗಳನ್ನು ನಿಲ್ಲಿಸಿಲ್ಲ.

ಶ್ರೀ ಬಿ. ಎಸ್. ಶಂಕರಪ್ಪ.—ಎಷ್ಟಿಮೇಟು ಸಾಂಕ್ಷನ್ ಆದನಂತರ ಟೆಂಡರ್ ಕರೆದರೂ ಕೂಡ ರಿಸ್ಟ್ರಾವ್ನ್ಸ್ ಬರಲಿಲ್ಲವೆಂದು ಕೆಲಸ ಸ್ಟಾರ್ಟ್ ಮಾಡಬಾರದು ಎಂದು ಸರಕಾರ ತಿಳಿಸಲಿಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ತಪ್ಪುಅಭಿಪ್ರಾಯವೆಂದು ವಿನಯದಿಂದ ಹೇಳುತ್ತೇನೆ. ಕೆಲಸ ನಿಲ್ಲಿಸಲು ಮತ್ತೆ ಬೇರೆ ಕಾರಣವಿರಬಹುದು. ಏನಾದರೂ ತಕರಾರು ಬಂದು ಕೇಸು ಕೋರ್ಟಿಗೆ ಹೋಗಿರಬಹುದು. ಸರಕಾರದ ಆರ್ಡರ್ ಸರಿಯಾಗಿಯೇ ಇದೆ. ತಪ್ಪು ಅಭಿಪ್ರಾಯ ಮಾಡಿಕೊಳ್ಳಬಾರದು.

INCLUSION OF CHATURTHI JAINS IN THE LIST OF BACKWARD CLASSES.

*Q.—945. Sri B. G. KHOT (Sadalga).—

Will the Government be pleased to state:—

the reasons for not including Chaturthi Jains in the list of Backward Classes ?

A.—Sri N. RACHIAH (Minister for Agriculture and Social Welfare)—

Chaturthi Jains are not included in the list of Backward Classes as they are a sub-sect among Jains who are forward.

Sri B. G. KHOT.—What action is Government taking to do justice to this sub-sect ?

†Sri N. RACHIAH.—As citizens of this country, they are entitled to all the considerations to which they are entitled.

Sri G. VENKATAI GOWDA.—Has Government ascertained whether this sub-sect is backward socially, econmically and educationally ?

ಅಧ್ಯಕ್ಷರು.—ಜೈನರು ಮುಂದುವರಿದವರು ಎಂದು ಉತ್ತರದಲ್ಲಿ ಹೇಳಿದ್ದಾರೆ. Because Jains are forward, the sub-section is not included in the backward list.

Sri G. VENKATAI GOWDA.—My question is whether this sub-section by itself socially and educationally backward or not. What is the Stage average in respect of education and employment for this sub-sect ?

ಅಧ್ಯಕ್ಷರು.—ಅದಕ್ಕೆ ಉತ್ತರ ಹೇಳಿದ್ದಾರೆ.

ಶ್ರೀ ಬಿ. ಕೆ. ನಾಗೂರ್.—ಚತುರ್ಥ ಜೈನರನ್ನು ಬಿಟ್ಟು ಇನ್ನುಳಿದ ಜೈನರು ಹಿಂದುಳಿದ ವರ್ಗಕ್ಕೆ ಸೇರಿದವರಾಗಿದ್ದಾರೆಯೇ ?

ಅಧ್ಯಕ್ಷರು.—ಜೈನರು ಮುಂದುವರಿದವರು ಎಂದು ಪರಿಗಣಿಸರಾಗಿದೆ. ಅಂದಮೇಲೆ ಒಳ ಪಂಗಡದವರು ಮುಂದುವರಿದವರೇ ಆಗುತ್ತಾರೆ.

Sri M. C. NARASIMHAN.—May I take it that in respect of the classification of castes as backward, the sub-sects as such are not taken into consideration ?

Sri N. RACHIAH.—Generally sub-sects are not taken into consideration, unless they are recognised Constitutionally ?

Sri M. C. NARASIMHAN.—The question of Constitutional recognition does unless they are Scheduled Castes. My question is whether as a matter of policy Government have excluded sub-sects from their consideration.

Sri N. RACHIAH.—This question pertains to the Jain Community and here we did not consider the sub-caste.

Sri C. J. MUCKANNAPPA.—Did the Nagan Gowda Committee consider the case sub-caste in making its recommendations ?

Sri N. RACHIAH.—I am answering a question on the Jain Community. If the Hon'ble Member were to send questions in respect of other Communities, I will answer them.

Sri G. VENKATAI GOWDA.—The question is whether the Nagan Gowda Committee considered the case of this sub-caste ?

Sri N. RACHIAH.—Government take it that the Committee considered all these questions and made their recommendations.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸ್ವಾಮೀ, ಆರ್ಥಿಕ ಪರಿಸ್ಥಿತಿಯ ಆಧಾರದ ಮೇಲೆ ಹಿಂದುಳಿದವರು ಎಂದು ತೀರ್ಮಾನ ಮಾಡಬೇಕೆಂದು ಕೇಂದ್ರ ಸರ್ಕಾರದಿಂದ ರಾಜ್ಯ ಸರಕಾರಕ್ಕೆ ಆದೇಶ ಬಂದಿದೆಯೇ ?

ಅಧ್ಯಕ್ಷರು.—ಈ ರೀತಿ ಪ್ರಶ್ನೆ ಕೇಳದೆ ಬೇರೆ ರೀತಿಯಾಗಿ ಕೇಳಬಹುದು. ಯಾವ ಆಧಾರವನ್ನು ಇಟ್ಟುಕೊಂಡು ಈ ವರ್ಗದವರು ಹಿಂದುಳಿದವರು ಅಥವಾ ಮುಂದುವರಿದವರು ಎಂದು ತೀರ್ಮಾನ ಮಾಡಿದ್ದೀರಿ ಎಂದು ಪ್ರಶ್ನೆ ಕೇಳಬಹುದು.

1-30 P.M.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಈಗತಾನೆ ಅಧ್ಯಕ್ಷರು ನೂಡನೆ ಕೊಟ್ಟಹಾಗೆ ಸರ್ಕಾರದವರು ಯಾವ ಒಂದು ಕೋಮುನ್ನಾಗಲು ಹಿಂದುಳಿದ ಅಥವಾ ಮುಂದುವರಿದ ಕೋಮು ಎಂಬುದನ್ನು ಯಾವ ಆಧಾರದ ಮೇಲೆ ತೀರ್ಮಾನಮಾಡಿದ್ದಾರೆ ?

ಶ್ರೀ ಎನ್. ರಾಚಯ್ಯ.—ನಮ್ಮ ರಾಜ್ಯಾಂಗದ ಆರ್ಟಿಕರ್ 15ರ ಒಳ ಕ್ಲಾಜ್ (4) ರಲ್ಲೂ ಮತ್ತು ಆರ್ಟಿಕರ್ 16ರ ಒಳ ಕ್ಲಾಜ್ (4)ರಲ್ಲೂ ತಿಳಿಸಿರುವಂತೆ ಸಾಮಾಜಿಕವಾಗಿಯೂ ಮತ್ತು ಶೈಕ್ಷಣಿಕವಾಗಿಯೂ ಯಾವ ಯಾವ ಕೋಮುಗಳು ಹಿಂದುಳಿದಿರುತ್ತವೆಂಬುದನ್ನು ಕುರಿತು ಸರ್ಕಾರಕ್ಕೊಂದು ವರದಿಯನ್ನು ಒಪ್ಪಿಸಬೇಕೆಂದು ಆ ಸಮಿತಿಯವರಿಗೆ ವಿಧಾಯಕ ಮಾಡಲಾಗಿತ್ತು. ಆ ಪ್ರಕಾರ ಆ ಡಾ. ನಾಗನಗೌಡ ಸಮಿತಿಯವರು ಸರ್ಕಾರಕ್ಕೆ ಒಂದು ವರದಿಯನ್ನೊಪ್ಪಿಸಿದ್ದಾರೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಡಾ. ನಾಗನಗೌಡ ಸಮಿತಿಯವರು ಅವರ ವರದಿಯಲ್ಲೇ ಯಾವ್ಯಾವ ಕೋಮುಗಳು ಸಾಮಾಜಿಕವಾಗಿ ಹಿಂದುಳಿದಿರುತ್ತವೆಂಬುದು ನಿರ್ಧರಿಸಲು ಸಾಧ್ಯವಿಲ್ಲವೆಂಬುದಾಗಿ ಬರೆದಿರತಕ್ಕ ಅಂಶ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎನ್. ರಾಚಯ್ಯ.—ಆ ವಿಚಾರವೂ ಸರ್ಕಾರದವರ ಗಮನಕ್ಕೆ ಬಂದಿದೆ ಮತ್ತು ಹೈಕೋರ್ಟಿನವರು ಹೇಳಿರತಕ್ಕ ವಿಚಾರವೂ ಸರ್ಕಾರದವರ ಗಮನಕ್ಕೆ ಬಂದಿದೆ. ಸಾಮಾಜಿಕವಾಗಿ ಹಿಂದುಳಿರುವ ಅಂಶ ಧೃಡಪಡವಿದ್ದರೂ, ಕೇವಲ ಜಾತೀ ಆಧಾರದ ಮೇಲೆ ಇದನ್ನು ನಿರ್ಧಾರ ಮಾಡಲು ರಾಜ್ಯಾಂಗದಲ್ಲಿ ಅವಕಾಶವಿದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.— ಡಾ. ನಾಗನಗೌಡ ಸಮಿತಿಯವರು ಜಾತೀ ಆಧಾರ ಬಿಟ್ಟರೆ ಯಾರೂ-ಹಿಂದುಳಿದವರು-ಯಾರು ಮುಂದುವರಿದವರು ಎಂಬುದನ್ನು ನಿರ್ಧರಿಸಲು ಸಾಧ್ಯವಿಲ್ಲವೆಂದು ಹೇಳಿ ಜಾತಿಯನ್ನೆ ಆಧಾರವಾಗಿಟ್ಟುಕೊಂಡು ಯಾರು ಹಿಂದುಳಿದವರು-ಯಾರು ಮುಂದುವರಿದವರು ಎಂಬುದನ್ನು ಅವರು ತೀರ್ಮಾನ ಮಾಡಿಲ್ಲವೇ ?

ಅಧ್ಯಕ್ಷರು.—ಆ ವಿಚಾರ ಆ ರಿಪೋರ್ಟಿನಲ್ಲೇ ಹೇಳಿದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಹಾಗೆ ಮಾಡುವುದು ರಾಜ್ಯಾಂಗಕ್ಕೆ ವಿರುದ್ಧವಾಗುವುದಿಲ್ಲವೇ ?

ಶ್ರೀ ಎನ್. ರಾಚಯ್ಯ.—ಇಲ್ಲ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಕೇಂದ್ರ ಸರ್ಕಾರದವರು ಪಾರ್ಲಿಮೆಂಟಿನ ಮುಂದೆ ಈ ಪ್ರಶ್ನೆ ಬಂದಾಗ್ಗೆ ಇದನ್ನು ಆರ್ಥಿಕ ಸ್ಥಿತಿಗತಿಗಳ ಮೇಲೆ ನಿರ್ಧರಿಸಬೇಕೆಂದು ತೀರ್ಮಾನ ಮಾಡಿದ್ದು ನಮ್ಮ ರಾಜ್ಯ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎನ್. ರಾಚಯ್ಯ.—ಇಲ್ಲ. ಆ ರೀತಿ ಒಂದು ತೀರ್ಮಾನವಾಗಿರುತ್ತೆಂಬ ವಿಚಾರವನ್ನು ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. ಆದರೆ ಅವರು ಏನು ಹೇಳಿದ್ದಾರೆಂದರೆ ಈ ವಿಚಾರವನ್ನು ಆಯಾಯ ರಾಜ್ಯ ಸರ್ಕಾರಗಳೇ ತೀರ್ಮಾನಿಸತಕ್ಕದ್ದೆಂದು ಅದರಲ್ಲಿ ಬರೆದಿತ್ತು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಈಗಾಗಲೆ ಬೊಂಬಾಯಿ ರಾಜ್ಯದಲ್ಲಿ ಇದರ ತೀರ್ಮಾನವನ್ನು ಆರ್ಥಿಕ ತಳಹದಿಯ ಮೇಲೆ ತೆಗೆದುಕೊಂಡು ಅದರಂತೆ ಅವರು ಜಾರಿ ಮಾಡುತ್ತಿಲ್ಲವೇ ?

ಶ್ರೀ ಎಚ್. ರಾಚಯ್ಯ.—ಇರಬಹುದು. ಆ ವಿಚಾರ ನಮ್ಮ ಸರ್ಕಾರಕ್ಕೆ ಗೊತ್ತಿಲ್ಲ. ಬೊಂಬಾಯಿ ಸರ್ಕಾರದವರು ಹಾಗೆ ಮಾಡಿರಬಹುದು. ಆದರೆ ಅಲ್ಲಿ ಅವರು ಈ ಹಂಜನ-ಗಿರಿಜನರ ಮಕ್ಕಳಂತೆ ಇತರ ಕೋಮಿನ ಯಾವ ಮಕ್ಕಳೇ ಆಗಲಿ ಅವರ ಕುಟುಂಬದ ವಾರ್ಷಿಕ ವರಮಾನ 1,200 ರೂ.ಗಳಿಗೆ ಕಡಮೆ ಇದ್ದರೆ ಅವರು ಹಿಂದುಳಿದ ವರ್ಗದ ಮಕ್ಕಳಾಗಿರಲಿ—ಮುಂದುವರಿದ ವರ್ಗದ ಮಕ್ಕಳಾಗಿರಲಿ ಎಲ್ಲರಿಗೂ ಶೈಕ್ಷಣಿಕ ವಿಚಾರದಲ್ಲಿ ಸರ್ಕಾರ ಒಂದೇ ರೀತಿಯಾದ ಸಹಾಯವನ್ನು ಕೊಡುತ್ತಿದ್ದಾರಂತೆ. ನಾವೂ ಸಹ ಅದೇ ರೀತಿ ಇಲ್ಲಿಯೂ ಆ ಪದ್ಧತಿಯನ್ನು ಜಾರಿಗೆ ತಂದಿದ್ದೇವೆ, ಎಲ್ಲರಿಗೂ ಅನುಕೂಲಗಳನ್ನು ಕಲ್ಪಿಸಿಕೊಡುತ್ತಿದ್ದೇವೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಬೊಂಬಾಯಿ ಸರ್ಕಾರದವರು ಹೀಗೆ ಮಾಡಿದ್ದಾರೆಂಬ ವಿಚಾರ "ನಮ್ಮ ಗಮನಕ್ಕೆ ಬಂದಿಲ್ಲ" ಎಂದು ಮಂತ್ರಿಗಳು ಈಗ ತಾನೆ ಹೇಳಿದರು. ಈ ವಿಚಾರ ಡಾ. ನಾಗನಗೌಡ ಕಮಿಟಿಯ ವರದಿಯಲ್ಲಿ ಅಡಕವಾಗಿಲ್ಲವೇ ?

(ಉತ್ತರವಿಲ್ಲ.)

ಶ್ರೀ ಬಿ. ಕೆ. ನಾಗೂರ್.—ಇಲ್ಲಿ ಉತ್ತರದಲ್ಲಿ ಚತುರ್ಥ ಜೈನರು—ಮುಂದುವರಿದಿರುವ ಜೈನರ ಒಂದು ಒಳಪಂಗಡವಾದ್ದರಿಂದ ಎಂತ ಹೇಳಿದೆ. ಈ ಒಂದು ಒಳಪಂಗಡ ಬಿಟ್ಟರೆ ಆ ಜೈನರಲ್ಲಿ ಬೇರೆ ಒಳಪಂಗಡಗಳು ಇನ್ನೂ ಇವೆ—ಕಾಸಾರ್-ಬೋಗಾರ್ ಎಂತ ಹೇಳಿ, ಅವುಗಳೆಲ್ಲವನ್ನೂ ಪರಿಗಣಿಸಿ ನೋಡಿದ್ದಾರೇನು ?

ಶ್ರೀ ಎಚ್. ರಾಚಯ್ಯ.—ಎಲ್ಲ ಜೈನರೂ ಒಂದೇ ಪಂಗಡಕ್ಕೆ ಸೇರಿದವರು. ಅದು ಮುಂದುವರಿದ ಪಂಗಡವೆಂದು ಪರಿಗಣಿಸಲಾಗಿದೆ.

Sri M. C. NARASIMHAN.—The Government was pleased to say that sub-sect shall not be taken into consideration. May I draw the attention of the Government to the fact that the Dr. Nagan Gowda Committee refers that a separate community among Vokkaligars should be treated as forward. Subsequently, Government have treated it as backward.

Sri N. RACHIAH.—Government took it for granted that the Committee has gone into all the details of even sub-caste and finally they made a report. Government did not say that the Committee has not examined all these facts.

Sri M. C. NARASIMHAN.—The question arose because of the answer given about sub-sects not being taken into consideration. If sub-sect is going to be taken into consideration in any particular case, then the story is different. It arose only out of your answer.

Sri N. RACHIAH.—Mr. Narasimhan has not followed the reply. We have taken communities as such and not sub-sect of community. Bunt community is a community; it is not a sub-caste of Vokkaliga community. Bunt community is a community obtaining in South Kanara District.